ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 11) ಉದ್ಧೃತ ಭಾಗ.

XX XX XX

38. ಕಡ್ಡಾಯ ನೋಂದಣಿಯಿಂದ ಲಿಖಿತಗಳ ವಿನಾಯಿತಿ.- ಭಾರತ ನೋಂದಣಿ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ xvi) 17ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಮತ್ತು (ಸಿ) ಖಂಡದಲ್ಲಿರುವುದು ಯಾವುದೂ-

(ಎ) ಸಹಕಾರ ಸಂಘದ ಆಸ್ತಿಯು ಪೂರ್ಣವಾಗಿ ಅಥವಾ ಭಾಗಶಃ ಸ್ಥಿರ ಸ್ವತ್ತನ್ನೊಳಗೊಂಡಿದ್ದರೂ ಆ ಸಂಘದ ಷೇರುಗಳಿಗೆ ಸಂಬಂಧಿಸಿದ ಯಾವುದೇ ಲಿಖಿತಕ್ಕೆ;

(ಬಿ) ಸಂಘವು ತನ್ನ ಇಡೀ ಸ್ಥಿರ ಸ್ವತ್ತನ್ನು ಅಥವಾ ಅದರ ಭಾಗವನ್ನು ಆಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ಡಿಬೆಂಚರುದಾರಕರ ಪ್ರಯೋಜನಕ್ಕಾಗಿ ನ್ಯಾಸವಾಗಿ ನ್ಯಾಸಧಾರಿಗಳಿಗೆ ಅಡಮಾನ ಮಾಡಿದ, ಪ್ರಸ್ತಾಂತರಿಸಿದ ಅಥವಾ ಅನ್ಯಥಾ ವರ್ಗಾಯಿಸಿದ ನೋಂದಾಯಿತ ಲಿಖಿತವು ಒದಗಿಸಿದ ಭದ್ರತೆಗೆ ಅದು ಧಾರಕನನ್ನು ಹಕ್ಕುದಾರನನ್ನಾಗಿಸುವಷ್ಟು ಮಟ್ಟಿಗೆ ಹೊರತು, ಅಂಥ ಯಾವುದೇ ಸಂಘವು ಹೊರಡಿಸದ ಮತ್ತು ಸ್ಥಿರ ಸ್ವತ್ತಿನಲ್ಲಿ ಯಾವುದೇ ಅಧಿಕಾರ, ವಹಿಸಿಕೊಡದ, ಮಿತಗೊಳಿಸದ ಅಥವಾ ಅಂತ್ಯಗೊಳಿಸದ ಯಾವುದೇ ಡಿಬೆಂಚರುಗಳಿಗೆ;

(ಸಿ) ಅಂಥ ಯಾವುದೇ ಸಂಘವು ಹೊರಡಿಸಿದ ಯಾವುದೇ ಇತರ ಡಿಬೆಂಚರಿನ ಹಿಂಬರಹಕ್ಕೆ ಅಥವಾ ವರ್ಗಾವಣೆಗೆ-

-ಅನ್ವಯವಾಗತಕ್ಕದ್ದಲ್ಲ.

XX XX XX

(ಉ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2001 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಪಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, 2001ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

" 2001ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಪಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, "2001ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ *

*ಅನುಬಂಧ --V

ಕರ್ನಾಟಕ ವಿಧಾನಸಭೆ
ಹನ್ನೊಂದನೇ ವಿಧಾನಸಭೆ
(ಮೂರನೇ ಅಧಿವೇಶನ)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ 2001

(2001ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 5)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ 2001 ಎಂದು ಕರೆಯತಕ್ಕದ್ದು.

(2) ಇದು 2001ರ ಏಪ್ರಿಲ್ ಮೊದಲನೇ ದಿನಾಂಕದಿಂದ ಚಾರಿಗೆ ಬರತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ: - ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ 1957ರ (1957ರ ಕರ್ನಾಟಕ ಅಧಿನಿಯಮ 35) (ಇದರಲ್ಲಿ ಇನ್ನು ಮುಂದೆ ಮೂಲ